ವಿಷಯ:-ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮಕ್ಕೆ 2007-08 ನೇ ಸಾಲಿಗೆ ರೂ.47.18 ಕೋಟಿಗಳ ಸರ್ಕಾರಿ ಖಾತರಿಯ ಬದಲಾಗಿ ರೂ.10.00 ಕೋಟಿಗಳ ಹೆಚ್ಚುವರಿ ಅನುದಾನವನ್ನು ಮತ್ತು ಬಂಡವಾಳ ವೆಚ್ಚ (ಯೋಜನೆ) ಅನುದಾನದಡಿಯಲ್ಲಿ ಲಭ್ಯವಿರುವ ರೂ.15.60 ಕೋಟಿಗಳನ್ನು ಬಿಡುಗಡೆ ಮಾಡುವ ಬಗ್ಗೆ.

ಓದಲಾಗಿದೆ:-1)ಸರ್ಕಾರದ ಸಮಸಂಖ್ಯೆ ಆದೇಶ ದಿನಾಂಕ 15-05-2007

2)ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರ ಪತ್ರ ಸಂಖ್ಯೆ.ಕೆಆರ್‌ಡಿಸಿಎಲ್/ಎಂ.ಡಿ/2007-08-1864 ದಿನಾಂಕ 24-09-200.

3)ಆರ್ಥಿಕ ಇಲಾಖೆಯ ಸರ್ಕಾರಿ ಆದೇಶ ಸಂಖ್ಯೆ ಎಫ್‌ಡಿ/252/ಬಿಆರ್‌ಎಸ್/2007 ದಿನಾಂಕ 27-11-2007.

4) ಸರ್ಕಾರದ ಸಮಸಂಖ್ಯೆ ಆದೇಶ ದಿನಾಂಕ 21-09-2007

## ಪ್ರಸ್ತಾವನೆ:-

ಓದಲಾದ 1) ರಲ್ಲಿನ ಸರ್ಕಾರದ ಆದೇಶದಲ್ಲಿ ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತಕ್ಕೆ 2007-08ನೇ ಸಾಲಿಗೆ ರೂ.200 ಕೋಟಿಗಳ ಸರ್ಕಾರಿ ಖಾತರಿಯನ್ನು ನೀಡಲಾಗಿದೆ.

ಓದಲಾದ (2) ರಲ್ಲಿನ ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರ ಪತ್ರದಲ್ಲಿ ಆರ್ಥಿಕ ಇಲಾಖೆಗೆ ಸ್ಪಷ್ಟೀಕರಣ ನೀಡಿ ರೂ.47.18 ಕೋಟಿಗಳ ಸರ್ಕಾರಿ ಖಾತರಿಯನ್ನು ನೀಡುವಂತೆ ಕೋರಲಾಗಿದೆ.

ಓದಲಾದ (3) ರಲ್ಲಿನ ಆರ್ಥಿಕ ಇಲಾಖೆಯ ಆದೇಶದಲ್ಲಿ ಸರ್ಕಾರಿ ಖಾತರಿಗೆ ಬದಲಾಗಿ ರೂ.10.00 ಕೋಟಿಗಳನ್ನು ಹೆಚ್ಚುವರಿ ಅನುದಾನವಾಗಿ ಲೆಕ್ಕಶೀರ್ಷಿಕೆ "5054-80-190-0-01-132 (ಪಿ)" ಅಡಿಯಲ್ಲಿ ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮಕ್ಕೆ ಪ್ರಸಕ್ತ ಸಾಲಿಗೆ ನೀಡಲಾಗಿದ್ದು, ಸದರಿ ಹೆಚ್ಚುವರಿಯಾಗಿ ಮಂಜೂರಾದ ಅನುದಾನವನ್ನು ಒಟ್ಟಾರೆ ಉಳಿತಾಯದಲ್ಲಿ ಗ್ರ್ಯಾಂಟ್ ನಂ.20 ಅಡಿಯಲ್ಲಿ ಪೂರಕ ಅಂದಾಜಿನಲ್ಲಿ ಪ್ರಸಕ್ತ ಆರ್ಥಿಕ ಸಾಲಿನಲ್ಲೇ ಮರುಹೊಂದಾಣಿಕೆಯನ್ನು ಮಾಡಿಕೊಳ್ಳಲು ಆದೇಶಿಸಿದೆ.

ಓದಲಾದ 4) ರಲ್ಲಿನ ಆದೇಶದಲ್ಲಿ ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತಕ್ಕೆ 2007-08ನೇ ಸಾಲಿಗೆ ಸರ್ಕಾರಿ ಖಾತರಿಗೆ ಬದಲಾಗಿ ಹೆಚ್ಚುವರಿ ಅನುದಾನವಾಗಿ ರೂ.50.00 ಕೋಟಿಗಳನ್ನು ಬಿಡುಗಡೆ ಮಾಡಿ ಆದೇಶ ಹೊರಡಿಸಲಾಗಿದೆ.

ಮೇಲಿನ ಅಂಶಗಳನ್ನು ಕೂಲಂಕಷವಾಗಿ ಪರಿಶೀಲಿಸಿ ಸರ್ಕಾರವು ಕೆಳಕಂಡಂತೆ ಆದೇಶ ಹೊರಡಿಸಲಾಗಿದೆ.

**ಸರ್ಕಾರಿ ಆದೇಶ** ಸಂಖ್ಯೆ.ಲೋಇ 70 ಇಎಪಿ 2007 ಬೆಂಗಳೂರು, ದಿ:01-12-2007

ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮಕ್ಕೆ 2007-08 ನೇ ಸಾಲಿಗೆ ಸರ್ಕಾರಿ ಖಾತರಿಗೆ ಬದಲಾಗಿ ಹೆಚ್ಚುವರಿ ಅನುದಾನವಾಗಿ ರೂ.10.00 ಕೋಟಿಗಳನ್ನು (ಹತ್ತು ಕೋಟಿ ರೂಪಾಯಿಗಳು ಮಾತ್ರ) ಲೆಕ್ಕಶೀರ್ಷಿಕೆ "5054-80-190-0-01-132 (ಪಿ) ಬಂಡವಾಳ ವೆಚ್ಚ" (ಯೋಜನೆ) ಅಡಿಯಲ್ಲಿ ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತಕ್ಕೆ ಬಿಡುಗಡೆ ಮಾಡಲು ಮತ್ತು ಬಂಡವಾಳ ವೆಚ್ಚ (ಯೋಜನೆ) ಅನುದಾನದಡಿಯಲ್ಲಿ ಲಭ್ಯವಿರುವ ರೂ.15.60 ಕೋಟಿ ರೂ.ಗಳನ್ನು (ಹದಿನೈದು ಕೋಟಿ ಅರವತ್ತು ಲಕ್ಷ ರೂಪಾಯಿಗಳು ಮಾತ್ರ) ಸೇರಿ ಒಟ್ಟು 25.60 ಕೋಟಿ ರೂ.ಗಳನ್ನು (ಇಪ್ಪತ್ತೈದು ಕೋಟಿ ಅರವತ್ತು ಲಕ್ಷ ರೂಪಾಯಿಗಳು ಮಾತ್ರ) ಬಿಡುಗಡೆ ಮಾಡಲು ಆದೇಶ ಹೊರಡಿಸಲಾಗಿದೆ.

ಮುಂದುವರೆದು, ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತಕ್ಕೆ 10.00 ಕೋಟಿ(ಹತ್ತು ಕೋಟಿ) ರೂಪಾಯಿಗಳನ್ನು ಮತ್ತು ಬಂಡವಾಳ ವೆಚ್ಚ ಅನುದಾನದಡಿಯಲ್ಲಿ ಲಭ್ಯವಿರುವ ರೂ.15.60 ಕೋಟಿಗಳು(ಹದಿನೈದು ಕೋಟಿ ಅರವತ್ತು ಲಕ್ಷ ರೂಪಾಯಿಗಳು ಮಾತ್ರ) ಸೇರಿ ಒಟ್ಟು 25.60 ಕೋಟಿ ರೂ.ಗಳನ್ನು(ಇಪ್ಪತ್ತೈದು ಕೋಟಿ ಅರವತ್ತು ಲಕ್ಷ ರೂಪಾಯಿಗಳು ಮಾತ್ರ) ಬಂಡವಾಳ ವೆಚ್ಚ (capital expenses) (Plan) ಅಡಿಯಲ್ಲಿ ಬಿಡುಗಡೆ ಮಾಡಿರುವುದರಿಂದ ಸದರಿ ಬಿಲ್ಲನ್ನು ಕೆ.ಎಫ್.ಸಿ.17(ಸಿ)4 ರಲ್ಲಿನಂತೆ ಮಹಾಲೇಖಪಾಲರು (ಎ ಅಂಡ್ ಇ) ಇವರಿಂದ ಆಥರೈಸೇಷನ್ ಇಲ್ಲದೆಯೇ ಮನ್ನಣೆ ಮಾಡುವುದು ಹಾಗೂ ಸದರಿ ಬಿಲ್ಲಿನ ಮೊತ್ತಕ್ಕೆ ಸರ್ಕಾರದ ಅಧೀನ ಕಾರ್ಯದರ್ಶಿ, ಲೋಕೋಪಯೋಗಿ ಇಲಾಖೆ (ಸೇವೆಗಳು-ಎ) ಇವರ ಮೇಲುರುಜು ಮಾಡಿಸುವುದು ಹಾಗೂ ಈ ಬಿಲ್ಲನ್ನು (ಸ್ವೀಕೃತದ ರಶೀತಿ) ರಾಜ್ಯ ಹುಜೂರ್ ಖಜಾನೆ, ಬೆಂಗಳೂರು ಇಲ್ಲಿಂದ ಡ್ರಾ ಮಾಡತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಸರ್ಕಾರಿ ಆದೇಶ ಸಂಖ್ಯೆ.ಲೋಇ/986/ ಆಕೋ-1/2007 ದಿನಾಂಕ 27-11-2007 ರಲ್ಲಿನ ಸಹಮತಿಯೊಂದಿಗೆ ಹೊರಡಿಸಲಾಗಿದೆ.

ಭಾರತದ ರಾಷ್ಟ್ರಪತಿಯವ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

M. Devi prasad 01/12/07

(ದೇವಿಪ್ರಸಾದ್ ಎಂ.)
ಸರ್ಕಾರದ ಅಧೀನ ಕಾರ್ಯದರ್ಶಿ,
ಲೋಕೋಪಯೋಗಿ, ಬಂದರು ಹಾಗೂ
ಒಳನಾಡು ಜಲಸಾರಿಗೆ ಇಲಾಖೆ (ಇಎಪಿ)

ಪ್ರತಿಯನ್ನು:-

1. ಮಹಾಲೇಖಪಾಲರು (ಅಕೌಂಟ್ಸ್) ಕರ್ನಾಟಕ ಬೆಂಗಳೂರು
2. ಪ್ರಧಾನ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ
3. ಪ್ರಧಾನ ಕಾರ್ಯದರ್ಶಿಗಳು, ಲೋಕೋಪಯೋಗಿ ಇಲಾಖೆ ಇವರ ಆಪ್ತ ಕಾರ್ಯದರ್ಶಿ
4. ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ (ಆಯವ್ಯಯ ಮತ್ತು ಸಂಪನ್ಮೂಲ)
5. ಕಾರ್ಯದರ್ಶಿಗಳು, ಯೋಜನಾ ಇಲಾಖೆ
6. ಕಾರ್ಯದರ್ಶಿಗಳು, ಲೋಕೋಪಯೋಗಿ ಇಲಾಖೆ
7. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ, ಬೆಂಗಳೂರು,
8. ವಿಶೇಷಾಧಿಕಾರಿ ಹಾಗೂ ಪದನಿಮಿತ್ತ ಸರ್ಕಾರದ ಉಪಕಾರ್ಯದರ್ಶಿ, ಲೋಕೋಪಯೋಗಿ ಇಲಾಖೆ (ಆರ್ಥಿಕ ಕೋಶ)
9. ಜಂಟಿ ನಿರ್ದೇಶಕರು, ಸ್ಟೇಟ್ ಹುಜೂರ್ ಟ್ರೆಷರಿ, ಕೆ.ಆರ್.ಸರ್ಕಲ್, ಬೆಂಗಳೂರು
10. ಉಪನಿರ್ದೇಶಕರು, ಟಿ.ಎನ್.ಎಮ್.ಸಿ. ಖನಿಜ ಭವನ, ಬೆಂಗಳೂರು
11. ಆಂತರಿಕ ಆರ್ಥಿಕ ಸಲಹೆಗಾರರು, ಲೋಕೋಪಯೋಗಿ ಇಲಾಖೆ ಇವರಿಗೆ ಸದರಿ ಹೆಚ್ಚುವರಿ ಮೊತ್ತವನ್ನು ಪೂರಕ ಅಂದಾಜಿನಲ್ಲಿ ಒಟ್ಟಾರೆ ಉಳಿಕೆಯಲ್ಲಿ ಮರುಹೊಂದಾಣಿಕೆಯನ್ನು ಮಾಡಿಕೊಳ್ಳಲು ಕ್ರಮ ತೆಗೆದುಕೊಳ್ಳುವುದು

~~12. ಮುಖ್ಯ ಮಾಹಿತಿ ಅಧಿಕಾರಿ, ಐ.ಡಿ.ಎಸ್.ಸೆಲ್~~

12. ಅಧೀನ ಕಾರ್ಯದರ್ಶಿ, ಲೋಕೋಪಯೋಗಿ ಇಲಾಖೆ (ಸೇವೆಗಳು)
13. ಹೆಚ್ಚುವರಿ ಪ್ರತಿಗಳು